ವಲಸೆ ಎಂಬ ಸಮಸ್ಯೆಯ ಹೃದಯವಿದ್ರಾವಕ ಮುಖವನ್ನು ಬಹುಸೂಕ್ಷ್ಮವಾಗಿ ತೆರೆದಿಡುವ ಕಿರುಚಿತ್ರ 'ಪೋಸ್ಟ್ ಆಫೀಸ್'.

# ಬೇರು ಕಿತ್ತ ಸಸಿಯ ಆಕ್ರಂದನ!



■ ಗೌರಿ

**ಹೆಸರು:** ಪೋಸ್ಟ್ ಆಫೀಸ್
**ನಿರ್ದೇಶನ:** ಡೇವಿಡ್ ಕಾರ್ಪ್, ಕೋರ್ಟ್ನೇ ಲೂ
**ಛಾಯಾಗ್ರಹಣ:** ಮ್ಯಾಕ್ಸ್ ಎರಿಕ್ಸನ್
**ಸಂಗೀತ:** ಜಾನ್ ಪೇಷ್ಟಾಕ್
**ಧ್ವನಿ ವಿನ್ಯಾಸ:** ಟಾಮ್ ಪಾವೊಲೆಂಟಿಯಾನೋ
**ತಾರಾಗಣ:** ಜೂಲಿ ಜಾನ್, ನವೋಮಿ ಶಿಹ್, ಲೀ ಝೂಂಗ್

'ಅನ್ಯ'ನೆನಿಸಿಕೊಳ್ಳುವುದು ಈ ಯುಗದಲ್ಲಿ ಮನುಷ್ಯನನ್ನು ಕಾಡಿದ ಬಹುಮುಖ್ಯ ಸಂಗತಿಗಳಲ್ಲೊಂದು. ಈ 'ಅನ್ಯ' ಎಂಬ ಶಬ್ದದ ಜೊತೆಯಲ್ಲಿಯೇ ಎಷ್ಟೊಂದು ದುರಂತಗಳು, ನೋವುಗಳು, ಗಾಯಗಳು ಅಡಗಿವೆ ಎಂದರೆ ಅವೆಲ್ಲವೂ ಮಾನವ ಚರಿತ್ರೆಯನ್ನು ನೋವಿನ ನದಿಯಿಂದ ತುಂಬಿವೆ. ತನ್ನದಲ್ಲದ ಜಾಗದಲ್ಲಿ ಹೋಗಿ ಬದುಕುವುದು, ಅಲ್ಲಿನವರೇ ಆಗಲು ಹೆಣಗುವುದು ಇವೆಲ್ಲವೂ ಬೇರೆ ಬೇರೆ ರೂಪ, ರೀತಿಗಳಲ್ಲಿ ಇಂದಿನ ಎಲ್ಲರನ್ನೂ ಕಾಡಿಯೇ ಇವೆ. ಜಾಗತಿಕಮಟ್ಟದಲ್ಲಿ ವಲಸೆ ಎನ್ನುವುದು ದೊಡ್ಡದೊಂದು ಸಮಸ್ಯೆಯಾಗಿ ಕಾಡುತ್ತಿದ್ದರೆ, ಹಳ್ಳಿ ಹಳ್ಳಿಗಳಿಂದ ಮಹಾನಗರಕ್ಕೆ ವಲಸೆಬಂದು ಬೇರೂರಲು ಹೆಣಗುತ್ತಿರುವವರ ಬಾಳಿನ ಪಾಡು ಮತ್ತೊಂದೇ ಅಧ್ಯಾಯ.

ಈ ಗಾಯದ ಆಳದ ನೋವನ್ನು ನಮ್ಮ ಮನಸೊಳಗೆ ಮಗುವೊಂದರ ಅಳುವಿನ ಚೀತ್ಕಾರವಾಗಿ ಕಾಡುವಂತೆ ಬಿಚ್ಚಿಡುವ ಕಿರುಚಿತ್ರ 'ಪೋಸ್ಟ್ ಆಫೀಸ್'. ಡೇವಿಡ್ ಕಾರ್ಪ್ ಮತ್ತು ಕೋರ್ಟ್ನೇಯ್ ಲೂ ಸೇರಿ ಈ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ.

ಹದಿನಾಲ್ಕು ನಿಮಿಷದ ಈ ಕಿರುಚಿತ್ರ ತಾನು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಎಷ್ಟು ಆಳಕ್ಕೆ ಇಳಿಯುತ್ತದೆಂದರೆ, ಕಿರುಚಿತ್ರ ಮಾಧ್ಯಮದ ಸಾಧ್ಯತೆಯನ್ನು ಸಮರ್ಥವಾಗಿ ಬಳಸಿಕೊಂಡ ಒಂದು ಉದಾಹರಣೆಯಾಗಿಯೂ ಇದನ್ನು ನೋಡಬಹುದು. ತೆರೆಯ ಮೇಲೆ ತೋರಿಸಿದ ಒಂದೊಂದು ದೃಶ್ಯವೂ ಹಲವು ಕವಲುಗಳಾಗಿ, ಬೇರುಗಳಾಗಿ ನಮ್ಮ ಮನಸೊಳಗೆ ಇಳಿಯುತ್ತ ಬೆಳೆಯುತ್ತಲೇ ಹೋಗುತ್ತವೆ.

ನಾಯಕಿ ತನ್ನ ಇಬ್ಬರು ಮಕ್ಕಳನ್ನು 'ಬಹುಸಂಸ್ಕೃತಿ ದಿನ'ಕ್ಕೆ ಕರೆದುಕೊಂಡು ಹೋಗುತ್ತಿದ್ದಾಳೆ. ಅವಳ ಮೂಲ ಚೀನಾ. ಆದರೆ ಆ ದೇಶದೊಂದಿಗೆ ಯಾವ ಸಂಬಂಧವೂ ಹೊಂದಿರದ ಅವಳಿಗೆ ಚೀನಾ ಭಾಷೆಯೂ ತಿಳಿದಿಲ್ಲ.

ರಸ್ತೆಯಲ್ಲಿ ಹೋಗುವಾಗ ಹೆದ್ದಾರಿ ಪಕ್ಕದಲ್ಲಿ ಒಂದು ಚಿಕ್ಕ ಮಗು ಒಬ್ಬಂಟಿಯಾಗಿ ಆಟವಾಡುತ್ತಿರುವುದು ಕಾಣಿಸಿ ಆತಂಕದಿಂದಲೇ ಕಾರು ನಿಲ್ಲಿಸಿ ಮಗುವಿನ ಬಳಿಗೆ ತೆರಳುತ್ತಾಳೆ. ಇವಳನ್ನು ನೋಡಿದ ಕೂಡಲೇ ಆ ಮಗು ಓಡಿಹೋಗಲು ಯತ್ನಿಸುತ್ತದೆ. ಅವಳನ್ನು ಸಂತೈಸಿ ಮಾತಾಡಿದರೆ ಅವಳಿಗೆ ಇಂಗ್ಲಿಷ್ ಬರದು. ಇವಳಿಗೆ ಚೀನಿ ಭಾಷೆ ಬರದು. ಏನೇ ಪ್ರಶ್ನೆ ಕೇಳಿದರೂ ಅವಳು ಒಂದೇ ಶಬ್ದ ಹೇಳತ್ತಾಳೆ. ಆ ಶಬ್ದ ಚೀನಿ ಭಾಷೆಯದ್ದು. ಅದರ ಅರ್ಥ ಇವಳಿಗೆ ತಿಳಿಯದು.

ಕೊನೆಗೆ ಅನಿವಾರ್ಯವಾಗಿ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸುತ್ತಾಳೆ. ಪೊಲೀಸರು ಬರುವಷ್ಟರಲ್ಲಿ ಆ ಹುಡುಗಿಯ ಅಮ್ಮನೂ ಬರುತ್ತಾಳೆ. ಅವಳ ಬಳಿ ಗುರುತಿನ ಚೀಟಿಯಾಗಲಿ, ಅಮೆರಿಕದ ನಾಗರಿಕಳೆನ್ನುವುದಕ್ಕೆ ಪುರಾವೆಯಾಗಲಿ ಇಲ್ಲ. ಹಾಗಾಗಿ ಅಕ್ರಮವಾಗಿ ನುಸುಳಿದ ಆರೋಪದ ಮೇಲೆ ಅವಳನ್ನು ಬಂಧಿಸಲಾಗುತ್ತದೆ. ಸಹಾಯ ಮಾಡಲಿಕ್ಕೆ ಹೋಗಿ ಅಪಾಯಕ್ಕೆ ಸಿಲುಕಿಸಿದ ಪಾಪಪ್ರಜ್ಞೆಯಲ್ಲಿಯೇ ಬಹುಸಂಸ್ಕೃತಿ ದಿನಕ್ಕೆ ಬರುವ ನಾಯಕಿ, ತನ್ನ ಪರಿಚಯದ ಚೀನಿ ಭಾಷೆ ಬಲ್ಲವರ ಬಳಿ ಆ ಪುಟ್ಟ ಹುಡುಗಿ ಹೇಳುತ್ತಿದ್ದ ಪದದ ಅರ್ಥ ಕೇಳುತ್ತಾಳೆ. ಅದರ ಅರ್ಥ 'ಪೋಸ್ಟ್ ಆಫೀಸ್' ಎಂದಾಗಿರುತ್ತದೆ! ಅಮ್ಮ ಪೋಸ್ಟ್ ಆಫೀಸಿಗೆ ಹೋಗಿದ್ದಾಳೆ ಎಂಬುದನ್ನು ಅರ್ಥ ಮಾಡಿಕೊಳ್ಳಲಾರದೆ ಅವಳನ್ನು ತೊಂದರೆಗೆ ಸಿಗಿಸಿದ್ದಳು.

ಇಡೀ ಚಿತ್ರ ಹಂತಹಂತವಾಗಿ ಬಿಚ್ಚಿಕೊಳ್ಳುತ್ತ ಹೋಗಿ ಒಂದು ಉತ್ಕೃಷ್ಟ ತುದಿಗೆ ಹೋಗಿ ತಲುಪುತ್ತದೆ. ಕೊನೆಯಲ್ಲಿ ಕೇಳುವ ಮಗುವಿನ ಚೀತ್ಕಾರ ಒಂದೇ ಕ್ಷಣದಲ್ಲಿ ಮನುಷ್ಯ ಕುಲದ ಚೀತ್ಕಾರದ ಪ್ರತಿಬಿಂಬವಾಗಿ ಮನಸೊಳಗೆ ರಿಂಗಣಿಸುತ್ತದೆ. ಬಹುಕಾಲ ನಮ್ಮನ್ನು ಕಾಡುತ್ತಲೇ ಇರುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/37ESJPm ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.